'ಕರೀಲಿಕ್ಕೆ ಮನೀತನಕ ಹೋಗಿದ್ದಿ. ಬಾ ಅಂತ ಎಷ್ಟ ಹೇಳಿದ್ರೂ ಕೇಳಲಿಲ್ಲ. ನೀನs ಹೇಳು. ಸಣ್ಣ ಸಣ್ಣ ಎರಡು ಹುಡುಗರು. ಅವನ್ನ ನೋಡಿ ಕರಳು ಕಿತ್ತಿ ಬರುವಂಗಾತು. ಆದ್ರ ಆಕಿಗೆ ಏನರ ಕಾಳಜಿ ಇದ್ರ ಹೌದಲ್ಲೋ? ಇಂಥಾ ಹೊತ್ತಿನಾಗೂ ಎಷ್ಟು ಸೊಕ್ಕಿನಿಂದ ಮಾತಾಡಿದಳಂದಿ. ಬಾ ಅಂತ ಗಟ್ಟ ಇದ್ದೆ.'

ಅನುಸೂಯಾ ಅವರು ಹೇಳುವದನ್ನು ಕೇಳುತ್ತಿದ್ದ ರತ್ನಾಕರನಿಗೆ ಜಾನಕಿ ಹಾಗೆ ಅಷ್ಟು ಕಠೋರಳಾಗಿ ನಡೆದುಕೊಳ್ಳಬಾರದಾಗಿತ್ತು ಅನಿಸಿತು. ಕಲಿತವಳು ಕೂಡ ಅಲ್ಲ. ಎಲ್ಲಿಯಾದರೂ ನೌಕರಿ ಹಿಡಿದು ತನ್ನ ಸಂಸಾರ ತಕ್ಕಮಟ್ಟಿಗೆ ನಡೆಸುವ ದಕ್ಷತೆ ಕೂಡ ಅವಳಲ್ಲಿಲ್ಲ ಎನ್ನುವ ಸ್ಪಷ್ಟ ಕಲ್ಪನೆ ರತ್ನಾಕರನಿಗಿತ್ತು. ವಸಂತ ಇದ್ದಾಗ ಕೂಡ ಜಾನಕಿ ಬಗ್ಗೆ ಅನುಸೂಯಾ ಇವರು ಹೇಳಿದ್ದನ್ನು ಕೇಳಿದರೆ ವಸಂತನಂತೆ ಅವಳಿಗೂ ವ್ಯವಹಾರ ಜ್ಞಾನ ಇಲ್ಲ ಅನಿಸುತ್ತಿತ್ತು. ಆದರೂ ವಿಚಿತ್ರ ಅಂದರೆ ವಸಂತನ ಬಗ್ಗೆ ಆ ಇವನ ಗೆಳೆಯರ ಮನೆಯಲ್ಲಿಯಂತೆ ರತ್ನಾಕರನ ಮನೆಯಲ್ಲೂ ವಸಂತನ ವ್ಯಾವಹಾರಿಕ ಬುದ್ಧಿಯ ಬಗ್ಗೆ ಪ್ರಶಂಸೆಯ ಮಾತುಗಳೇ ಕೇಳಿಬರುತ್ತಿದ್ದವು.

'ವಸಂತ ಖರೇ ಮನಶ್ಯಾ. ಭಾಳ ವ್ಯಾವಹಾರಿಕ. ಕಲಕೋರಿ ಅವನಿಂದ. ಎಲ್ಲಿ ಹೋದರೂ ಮರೀದನ ಏನಾದರೂ ತಂದೇ ಇರ್ತಾನ. ಮೊನ್ನೆ ನೋಡು ಕೊಲ್ಹಾಪುರಕ್ಕ ಅಂಬಾಬಾಯಿ ದರ್ಶನಕ್ಕೆಂದು ಹೋಗಿದ್ದ. ಬರೂ ಮುಂದ ನನಗ ಪ್ರಸಾದ ಮತ್ತು ಎಂಥಾ ಬಣ್ಣಾ ತಂದಾನ ನೋಡು.'

ಎಂದು ತಾಯಿ ಹೇಳುತ್ತಿದ್ದುದು ಸರಿ ಅನಿಸಿ ಈತ ಕೂಡ ಮುಂಬೈಗೆ ಹೋದಾಗ ವಸಂತನ ಆರು ವರ್ಷದ ತಂಗಿಗೆಂದು ಫ್ರಾಕು ತೆಗೆದುಕೊಂಡು ಬಂದಾಗ ತಾಯಿ 'ದುಡ್ಡ ಇತ್ತಂದು ಖರ್ಚು ಮಾಡ್ಲಿಕ್ಕೆ ತಿಳೀಬೇಕಪಾ ದೊಡ್ಡ ಊರಾಗ ಇರ್ಲಿ ಕೈಯಾಗ ಅಂತ ರೊಕ್ಕ ಕೊಟ್ರ ವ್ಯವಹಾರ ಇಲ್ಲದವರ್ಹಾಂಗ ಆ ವಸಂತನ ತಂಗಿಗೆ ಸುಡಗಾಡು ಎಂಥಾದೋ ಫ್ರಾಕು ತಂದಾನ. ತನಗರೆ ಅಥವಾ ನಿನಗರೆ ಏನಾದ್ರೂ ತರಲಿಕ್ಕೆ ತಿಳೀಬಾರ್ದ ನಿಮ್ಮ ಅಣ್ಣಗ' ಎಂದು ತಮ್ಮನಿಗೆ ಹೇಳುವದನ್ನು ಕೇಳಿ ಯಾವುದು ವ್ಯಾವಹಾರಿಕ, ಯಾವುದು ಅವ್ಯಾವಹಾರಿಕ ಅನ್ನುವದೇ ತಿಳಿದಂತಾಗಿತ್ತು. ಆದರೂ ತಾಯಿಯ ಮಾತು ಕೇಳಿ ಕೇಳಿ ಬಹುಶಃ ಅವನು ಮುಂದೆ ವ್ಯಾವಹಾರಿಕವಾಗಿರಬೇಕು– ಆದರೆ ವಸಂತನಂತಲ್ಲ.

ವಸಂತನ ಸುದ್ದಿ ಕೇಳಿದಾಗ ಅವನಿಗೆ ಏನು ಅನಿಸಿತ್ತು? ಅಥವಾ ಏನೂ ಅನಿಸದಂತಹ ದಿಗ್ಭ್ರಮೆ. ಶಕ ಆಗಿತ್ತೋ? ಕಣ್ಣಂಚಿನಲ್ಲಿ ನೀರಾದರೂ ಬಂದಿತ್ತೋ ಹೇಗೆ ಅನ್ನುವುದೂ ಸರಿಯಾಗಿ ನೆನಪಾಗುತ್ತಿಲ್ಲ. ಯಾರೋ ಹೇಳಿದ್ದರು: ಅದೇ ಊರಿನ ಹೊಟೇಲಿನಲ್ಲಿ ನಿದ್ದೆ ಗುಳಿಗೆ ಸೇವಿಸಿ ಕಾಯಮ್ ಮಲಗಿಬಿಟ್ಟ ಎಂದು. ಮತ್ತಾರೋ ಕೆರೆ ಹಾರಿಕೊಂಡಿದ್ದ ಅಂದರು. ಇವನ ಗೆಳೆಯ ಸುಧೀರ (ಅಂದರೆ ವಸಂತನ ಗೆಳೆಯ) ಕೂಡು ಜೋಕಾಲಿ ಕಂಬಕ್ಕೆ ಲುಂಗಿಯಿಂದ ನೇತುಹಾಕಿಕೊಂಡಿದ್ದ ಎಂದು ತಿಳಿಸಿದ. ಒಟ್ಟಿನಲ್ಲಿ ಆತ ಆತ್ಮಹತ್ಯೆ ಮಾಡಿಕೊಂಡಿದ್ದು ಖಚಿತವಾಗಿತ್ತು. ಆದರೆ ಯಾವ ರೀತಿಯಿಂದ ಅನ್ನುವುದರ ಬಗ್ಗೆ ಯಾರಿಗೂ ನಿಶ್ಚಿತವಾಗಿ ಗೊತ್ತಾಗಿರಲಿಲ್ಲ. ಯಾಕೆಂದರೆ ಸುದ್ದಿ ತಿಳಿದ ಮೇಲೆ ಯಾರೂ ಹೋಗಿರಲೇ ಇಲ್ಲ – ಅವನ ಹೆಂಡತಿಯ ಭೇಟ್ಟಿಗೆ, ಅವಳ ಪರಿಚಯ ಯಾರಿಗೂ ಅಷ್ಟು ಚೆನ್ನಾಗಿರಲಿಲ್ಲ ಎಂಬ ಮಾತೂ ಹಾಗೆ ನೋಡಿದರೆ ನಿಜವಾಗಿತ್ತು. ಮುಂಬಯಿಯ ಹತ್ತಿರದ ಖರ್ಡಿ ಅನ್ನುವ ಊರಲ್ಲಿದ್ದ ಅನ್ನುವದು ಬಹುಶಃ ಎಲ್ಲರಿಗೂ ಗೊತ್ತಿತ್ತು. ಖರ್ಡಿ ನಂತರ